

ಇಂತಹ ದುಷ್ಟ ಯೋಚನೆಗಳು ಪುಸುಕ್ಕನೆ ಬಂದೇ ಬಿಡುತ್ತವೆ.

ಕೆಲವು ಸಲ ಹಕ್ಕಿಗಳು ಗೂಡಿನಿಂದ ಹಾರಿ ಮುಂದೆ ಬಂದು ರೆಕ್ಕೆ ಬಿಚ್ಚುತ್ತವೆ. ಅವು ರೆಕ್ಕೆ ಬಿಚ್ಚಿ ಹಾರುವ ಚಿತ್ರವನ್ನೇ ತೆಗೆಯ ಬಯಸುವ ನಮಗಿದು ಸವಾಲಿನ ಕೆಲಸ. ಯಾಕೆಂದರೆ ಪ್ರತಿ ಹಕ್ಕಿಯ ರೆಕ್ಕೆ ಬಡಿಯುವ ವಿಧಾನ ಬೇರೆ ಬೇರೆ ಆಗಿರುತ್ತದೆ. ಕೆಲವು ಕೂತಲ್ಲಿಂದಲೇ ರೆಕ್ಕೆ ಬಿಚ್ಚಿ ಹೊರಟರೆ ಹಲವು ಕೊಂಚ ಪಯಣಿಸಿ ನಂತರ ರೆಕ್ಕೆ ಹರಡುತ್ತವೆ.

ಗೋವಾದಲ್ಲಿ ಮೂರು ಬೆರಳಿನ ಮಿಂಚುಳ್ಳಿಯ ಚಿತ್ರ ತೆಗೆಯುವಾಗ ಇಂಥದ್ದೇ ಸಮಸ್ಯೆ ಆಗಿತ್ತು. ಆಗ ಗೆಳೆಯ ಅನಂತಮೂರ್ತಿಯವರು, 'ಹಕ್ಕಿ ಹಾರಿ ಮುಂದೆ ಚಲಿಸಿ ಯಾವಾಗ ತನ್ನ ರೆಕ್ಕೆ ತೆರೆದು ಬಡಿಯುತ್ತದೆಯೋ ಅಲ್ಲಿಗೆ ನಿಮ್ಮ ಕ್ಯಾಮೆರಾ ಫೋಕಸ್ ಆಗಬೇಕು. ನೀವು ಆರಂಭದಲ್ಲೇ ಅದನ್ನು ಸೆರೆ ಹಿಡಿಯಲು ಹೋದರೆ ಹೀಗೇ ಆಗುವುದು. ಮೊದಲು ಹಕ್ಕಿ ಹಾರುವ ಹಂತಗಳನ್ನು ಗಮನಿಸಿ, ಆಮೇಲೆ ಚಿತ್ರ ತೆಗೆಯಬೇಕು' ಎಂದಿದ್ದರು. ಅವರ ಅನುಭವದ ಮಾತು ನಿಜ.

ಸಾಧಾರಣವಾಗಿ ಗೂಡಿನೊಳಗೆ ಹೋಗುವ ಹಕ್ಕಿಗಳು ಮರಿಗಳಿಗೆ ಗುಟುಕು ಕೊಟ್ಟು ಕೆಲ ಕ್ಷಣ ತಪಾಸಣೆ ನಡೆಸುತ್ತವೆ. ಯಾವುದಾದರೂ ಮರಿ ಆಹಾರ ನುಂಗಲಾಗದೆ ಒದ್ದಾಡುತ್ತಿದ್ದರೆ ಅದರ ಗಂಟಲಿನಿಂದ ತುತ್ತು ಕಿತ್ತು ಬೇರೆ ಮರಿಯ ಬಾಯಿಗೆ ತುರುಕುತ್ತವೆ. ಬಾಯಿ ಕಳೆದು ಅಬ್ಬಬ್ಬೋ ಎಂದು ಕಿರುಚುವ ಮರಿಗಳನ್ನು ಗಮನಿಸುತ್ತವೆ. ಬಕಾಸುರರಂತೆ ಊಟವನ್ನು ಇಡಿಯಾಗಿ ನುಂಗುವ ಹಕ್ಕಿಗಳು ಆ ಕ್ಷಣವೇ ಕಕ್ಕ ಮಾಡುತ್ತವೆ. ಮರಿಗಳು ತಮ್ಮ ವಿಸರ್ಜನೆಯನ್ನು ಕುಂಡೆ ಎತ್ತಿ ಪುಸ್ಸೆಂದು ಬಿಳಿ ಬಲೂನಿಗೆ ಗಾಳಿ ತುಂಬಿಸಿದ ರೀತಿಯಲ್ಲಿ ಹೊರಹಾಕುತ್ತವೆ. ಇದನ್ನು ತಾಯಿ ತಂದೆ ಹಕ್ಕಿಗಳು ಪ್ರಸಾದವೆಂಬಂತೆ ಹಿಡಿದು ಗಬಕ್ಕನೆ ನುಂಗುತ್ತವೆ. ಈ ಹಿಕ್ಕೆ ಹಿಡಿದು ನುಂಗುವ ವಿಚಿತ್ರ ನಡವಳಿಕೆಯ ಹಿಂದೆ ಪ್ರಕೃತಿಯ ಯಾವ ಸಂದೇಶ ಅಡಗಿದೆಯೋ ಬಲ್ಲವರು ಯಾರು? ಹಕ್ಕಿಗಳ ಲೋಕ ತಿಳಿಯಲು ಹೊರಟಷ್ಟೂ ಮತ್ತಷ್ಟು ನಿಗೂಢವಾಗುತ್ತದೆ.

●